ಸೋದರರೇ, ನಾವು ನಮ್ಮ ಭಾವನೆಯಿದ್ದಂತೆ ಸಾಧನೆಯನ್ನು ಮಾಡುತ್ತೇವೆ. ನಮ್ಮಲ್ಲಿ ಕೆಲವರು ರಾಮನನ್ನು ಶಿಶುವೆಂದು ಭಾವಿಸುವರು. ಮತ್ತೆ ಕೆಲವರು ಬಾಲಕ ರಘುವೀರನ ಚಿಂತನೆಯನ್ನು ಮಾಡುವರು. ಇನ್ನೂ ಕೆಲವರು ರಾಮಚಂದ್ರ–ಸೀತಾದೇವಿಯರನ್ನು ಜಗತ್ತಿನ ತಂದೆತಾಯಿಗಳೆಂದು ಉಪಾಸನೆ ಮಾಡುವರು. ಆದ್ದರಿಂದಲೇ ನಾವು ಕನಕಭವನದಲ್ಲಿ, ದರ್ಬಾರಿನಲ್ಲಿ ಅವರ ದರ್ಶನ ಮಾಡಿ ಆನಂದಿಸುತ್ತೇವೆ. ಆ ಸಾಧುವು ರಾಮಾಯತನೆಂಬುದೇನೋ ನಿಜ, ಆದರೆ ಆ ಸಾಧುವಿನ ಸಾಧನೆಯ ಮರ್ಮವೇನೆಂಬುದು ನಮಗಾರಿಗೂ ತಿಳಿಯದು. ನಡೆಯಿರಿ, ನಾವೆಲ್ಲರೂ ಒಂದು ದಿನ ಆ ಮಹಾತ್ಮನ ಹತ್ತಿರ ಹೋಗೋಣ. ಆತನೊಡನೆ ವಿಚಾರವಿನಿಮಯ ಮಾಡಿಕೊಳ್ಳೋಣ." ಈ ಮಾತು ಎಲ್ಲರಿಗೂ ಒಪ್ಪಿಗೆಯಾಯಿತು. ಒಬ್ಬ ಸಾಧು ಇನ್ನೊಬ್ಬ ಸಾಧುವಿನ ಭಾವವನ್ನು ತಿಳಿಯುತ್ತಾನೆ ಅಥವಾ ತಿಳಿಯಲು ಪ್ರಯತ್ನಿಸುತ್ತಾನೆ ಎನ್ನುವುದು ಸಂಪ್ರದಾಯದ ಮಾತು.

ಕೊನೆಗೆ ಕೆಲವು ಸಾಧುಗಳು ಸೇರಿ, ಸರಯೂ ನದಿಯಲ್ಲಿ ಸ್ನಾನ ಜಪಾದಿಗಳನ್ನು ಮುಗಿಸಿ, ಆ ಮಹಾತ್ಮನ ಹತ್ತಿರ ಹೋದರು. ಅದೇ ಪ್ರಸನ್ನವದನ, ಕೌತುಕದ ಮುಗುಳುನಗೆ, ತನಗೆ ಎಲ್ಲಾ ತಿಳಿದಿದೆ ಎಂಬಂತೆ. ಆ ವಿಚಿತ್ರ ಸಾಧು ಬಂದಿದ್ದ ಸಾಧುಗಳನ್ನು ಆದರದಿಂದ ಬರಮಾಡಿಕೊಂಡು ಕುಳಿತುಕೊಳ್ಳಲು ಹೇಳಿದರು. ಅನಂತರ ಕೈ ಜೋಡಿಸಿ ಕೇಳಿದರು, "ನಾನು ಮಹಾತ್ಮರಿಗೇನು ಸೇವೆಮಾಡಲಿ?" ಈ ಪ್ರಶ್ನೆಗೆ ಸಾಧುಗಳು ತಯಾರಾಗಿಯೇ ಬಂದಿದ್ದರು. ಸಾಧುಗಳಲ್ಲೊಬ್ಬರು ಹೇಳಿದರು, "ಮಹಾರಾಜ್, ನೀವು ಅಯೋಧ್ಯೆಯಲ್ಲಿ ಯಾವ ಮಂದಿರಕ್ಕೂ ಹೋಗುತ್ತಿಲ್ಲ! ಈ ಸರಯೂ ತೀರದಲ್ಲೇ ಆಸನವನ್ನು ಹಾಕಿ ಹಗಲೂರಾತ್ರಿ ಕಳೆಯುತ್ತೀರಿ, ನೀವು ರಾಮಚಂದ್ರನನ್ನು ಯಾವ ರೀತಿ ಭಜಿಸುತ್ತೀರಿ ಎಂಬುದನ್ನು ತಿಳಿಯುವ ಇಚ್ಛೆಯಿಂದ ಇಂದು ನಾವು ಬಂದಿದ್ದೇವೆ."

ಮಹಾತ್ಮರ ಮುಖದಲ್ಲಿ ಮಂದಹಾಸ ಬೆಳಗಿತು. ಅವರು ಹೇಳಿದರು, "ನೋಡಿ, ಪ್ರತಿಯೊಬ್ಬರೂ ತಮ್ಮ ತಮ್ಮ ಮನಸ್ಸಿನ ಭಾವನೆಯಂತೆ ಸಾಧನೆಯಲ್ಲಿ ಮುಳುಗುತ್ತಾರೆ. ಒಂದು ಭಾವವನ್ನು ಗಟ್ಟಿಯಾಗಿ ಹಿಡಿದುಕೊಂಡು ಸಾಧನೆಯ ಜಗತ್ತಿನಲ್ಲಿ ಜೀವನವನ್ನೆಲ್ಲ ಕಳೆಯುತ್ತಾರೆ. ನಾನು ಚಿಕ್ಕ ವಯಸ್ಸಿನಿಂದಲೇ ನನ್ನ ತಂದೆಯ ಹತ್ತಿರ 'ಯೋಗವಾಸಿಷ್ಠ' ವನ್ನು ಕೇಳುತ್ತಿದ್ದೆ. ಆಗೆಲ್ಲಾ ವಸಿಷ್ಠರ ಬಗ್ಗೆ ನನ್ನ ಮನಸ್ಸಿನಲ್ಲಿ ತೀವ್ರ ಆಕರ್ಷಣೆ ಉಂಟಾಗುತ್ತಿತ್ತು. ಅವರದು ಎಂತಹ ಅದ್ಭುತ ತಪಸ್ಸು, ಚಾರಿತ್ರ್ಯಬಲ ಮತ್ತು ತೀಕ್ಷ್ಣ ಪ್ರಜ್ಞೆ! ಅದರ ಫಲಸ್ವರೂಪವಾಗಿ, ಆ ವಸಿಷ್ಠರ ರೀತಿಯಲ್ಲಿಯೇ ನಾನು ಕೂಡ ನನ್ನ ಉಪಾಸ್ಯದೇವರಾದ ರಾಮನನ್ನು ಶಿಷ್ಯನೆಂದು ತಿಳಿಯಲಾರಂಭಿಸಿದೆ; ಮನಸ್ಸಿನಲ್ಲೇ ಅವನಿಗೆ ಶಾಸ್ತ್ರ ಹೇಳಿಕೊಡುತ್ತಿದ್ದೆ. ಸಾಧನಾಜೀವನದಲ್ಲಿ ಗುರುಶಿಷ್ಯರ ಈ ಸಂಬಂಧ ಸುದೃಢವಾಗುತ್ತ ಹೋಯಿತು. ಆದುದರಿಂದಲೇ ಇಂದು ಕೂಡ ನನ್ನ ಶಾಸ್ತ್ರ ಪಾಠ, ಶಾಸ್ತ್ರಚರ್ಚೆ ಎಲ್ಲಾ ಆ ಶಿಷ್ಯರೂಪಿ ರಾಮನ ಜೊತೆಯಲ್ಲೇ ನಡೆಯುತ್ತಿದೆ. ಆ ಭಾವ ಈಗ ಎಷ್ಟೊಂದು ಗಾಢವಾಗಿದೆ ಎಂದರೆ, ದೇವಸ್ಥಾನದಲ್ಲಿ ರಾಮಸೀತೆಯರ ದರ್ಶನಕ್ಕೆ ಹೋಗುವ ಪ್ರಮೇಯವೇ ಬರುವುದಿಲ್ಲ. ಶಿಷ್ಯ ತನ್ನ ಗುರುಸನ್ನಿಧಿಯಲ್ಲಿ ಆನಂದದಿಂದಲೇ ಇದ್ದಾನೆ. ಇದೇ ನಿಮ್ಮ ಪ್ರಶ್ನೆಗೆ ನನ್ನ ಉತ್ತರ."

ಬಂದಿದ್ದ ಸಾಧುಗಳು ಈಗ ನಿರುತ್ತರರಾದರು. ಈ ಬಗೆಯ ಭಾವದ ಉಪಾಸನೆಯನ್ನು ಅವರು ಹಿಂದೆಂದೂ ಕೇಳಿಯೇ ಇರಲಿಲ್ಲ. ಈಗ ಅವರು ಆ ಸಾಧುವನ್ನು ರಾಮಮಂದಿರಕ್ಕೆ ಬರಲು ನಾನಾ ವಿಧವಾಗಿ ಪ್ರಾರ್ಥಿಸಲಾರಂಭಿಸಿದರು. ಒಬ್ಬಾತ ಹೇಳಿದ, "ರಾಮನ ವಿವಾಹದ ನಂತರ ಕೈಕೇಯಿ ಸೀತೆಗೆ, ಕನಕಭವನವನ್ನು ಕೊಟ್ಟಿದ್ದಳು. ಅಲ್ಲಿ ಮಾತೆ ಜಾನಕಿ ಮತ್ತು ಶ್ರೀರಾಮರ ಪ್ರತಿಮೆಯುಳ್ಳ 'ರಾಮದರ್ಬಾರ್' ಇದೆ. ಒಂದು ದಿನ ಮಾತ್ರ ನಮ್ಮ ಜೊತೆಯಲ್ಲಿ ಬನ್ನಿ. ಅವರ ದರ್ಶನ ಮಾಡುವಿರಂತೆ." ಅದಕ್ಕೆ ಮಹಾತ್ಮರು ಸಂಕೋಚದಿಂದ ಹೇಳಿದರು, "ನೋಡಿ, ನನ್ನನ್ನು ಹಠಾತ್ತಾಗಿ ಕಂಡರೆ ಸೀತಾಮಾತೆಗೆ ನಾಚಿಕೆಯಾಗುತ್ತದೆ; ರಾಮ ಕೂಡ ಎದ್ದು ನಿಲ್ಲುತ್ತಾನೆ. ಹೀಗಾಗಿ ನಾನು ಹೋಗುವುದು ಉಚಿತವಲ್ಲ."

ಆದರೆ ಸಾಧುಗಳು ಬಿಡುತ್ತಿಲ್ಲ. ಆ ಮಹಾತ್ಮನನ್ನು ಒತ್ತಾಯಪೂರ್ವಕವಾಗಿ ಕರೆದುಕೊಂಡು ಹೊರಟರು. ಅವರು ಕನಕಭವನವನ್ನು ಪ್ರವೇಶಿಸಲು ಸಂಕೋಚಪಡುತ್ತಿದ್ದರು. ಆದರೂ ಸಾಧುಗಳು ಬಿಡಲಿಲ್ಲ. ಆಗ ಒಂದು ಆಶ್ಚರ್ಯಕಾರಿ ಘಟನೆ ನಡೆಯಿತು. ಆ ಮಹಾತ್ಮರು ಪ್ರವೇಶಿಸುತ್ತಿದ್ದಂತೆಯೇ, ಸೀತಾದೇವಿಯ ಕಿರೀಟ ಪಕ್ಕಕ್ಕೆ ಸರಿಯಿತು, ತಲೆಯ ಮೇಲಿನ ಮುಸುಕು ಜಾರಿ ಮುಖದ ಮೇಲೆ ಬಂತು. ಇದಲ್ಲದೆ ಶ್ರೀರಾಮಚಂದ್ರನು ಕೂಡ ಎದ್ದುನಿಂತನು.

ಆ ಮಹಾತ್ಮರು ಆ ತಕ್ಷಣ ಹಾಗೆಯೇ ಹಿಂತಿರುಗಿದರು. ಇಷ್ಟದೇವ–ದೇವಿಯರ ಮುಂದೆ ಆ ಸಾಧುವನ್ನು, ಅವರ ಭಾವಕ್ಕೆ ವಿರುದ್ಧವಾಗಿ ಕರೆತಂದದ್ದು ಸರಿಯಾದುದಲ್ಲವೆಂದು ರಾಮಾಯತ ಸಾಧುಗಳು ಇದರಿಂದ ತಿಳಿದುಕೊಂಡರು. ಆ ಸಾಧುವಿನಲ್ಲಿ ಕ್ಷಮೆ ಬೇಡಿದರು. ಸಾಧುಗಳು ಮತ್ತೆ ಸರಯೂ ನದಿಯ ತೀರಕ್ಕೆ ತೆರಳಿದರು. ಆದರೆ ಈಗ ಆ ರಾಮಾಯತ ಸಾಧುವೆಲ್ಲಿ? ಬಹುಶಃ ಅವರು ಚಿತ್ರಕೂಟದ ದಾರಿಯಲ್ಲಿ ಯಾವುದೋ ನಿರ್ಜನ ಗುಹೆಯನ್ನರಸುತ್ತಾ ಹೊರಟು ಹೋದರೆಂದು ತೋರುತ್ತದೆ. ಅಲ್ಲಿ ಆತ ತಮ್ಮ ರಘುವೀರನಿಗೆ ಶಾಸ್ತ್ರಪಾಠ ಮಾಡುತ್ತಿರುತ್ತಾರೆ ಮತ್ತು ಅವನೊಡನೆ ಗಂಭೀರ ಶಾಸ್ತ್ರಾಲೋಚನೆಯಲ್ಲಿ ಮುಳುಗಿರುತ್ತಾರೆ. *

# ನೆನಪಿನಂಗಳದಿಂದ

ಯಾರು ನನಗೆ ಪ್ರೀತಿಯಿಂದ ಆಶ್ರಯವಿತ್ತಿದ್ದರೋ ಅವರೆಲ್ಲರೂ ಒಬ್ಬೊಬ್ಬರಾಗಿ ನನ್ನನ್ನು ಬಿಟ್ಟು ಹೊರಟುಹೋದರು. ಒಮ್ಮೆ ಸ್ವಾಮಿ ಶಾರದಾನಂದರೆದುರಿಗೆ ದುಃಖದಿಂದ ಇದನ್ನು ತೋಡಿಕೊಂಡೆ. ಅವರೆಂದರು, "ಇದುವರೆಗೂ ನಿನ್ನ ಭವಿಷ್ಯದ ಬಗ್ಗೆ ನನಗೆ ಚಿಂತೆಯಿತ್ತು. ಆದರೆ ಈಗ ನಾನು ನಿಶ್ಚಿಂತನಾಗಿದ್ದೇನೆ." ಹೀಗೇಕೆ ಹೇಳಿದಿರೆಂದು ಕೇಳಿದಾಗ ಅವರು ನುಡಿದರು, "ಠಾಕೂರ್ ಹಾಗೂ ಶ್ರೀಮಾತೆ ನಿನ್ನ ಜವಾಬ್ದಾರಿ ತೆಗೆದುಕೊಂಡಿದ್ದಾರೆ, ನಿಜ. ಆದರೆ ಈಗಂತೂ ಅವರು ಸಂಪೂರ್ಣವಾಗಿ ನಿನ್ನನ್ನು ತಮ್ಮ ರಕ್ಷಣೆಯಲ್ಲಿಟ್ಟುಕೊಂಡಿದ್ದಾರೆಂದು ನನಗೆ ಸ್ಪಷ್ಟವಾಗಿ ಅರಿವಾಗಿದೆ." ಮುಂದುವರೆದು ಹೇಳಿದರು, "ಶ್ರೀಮಾತೆಯನ್ನು ಇದುವರೆಗೂ ಮನುಷ್ಯರೂಪದಲ್ಲಿ ಪೂಜೆಮಾಡಿದೆ. ಇನ್ನು ಅವರ ನೈಜಸ್ವರೂಪವನ್ನು ಅರಿಯುವ ಪ್ರಯತ್ನ ಮಾಡು. ಮನುಷ್ಯ ಜನ್ಮ ಪಡೆದಿರುವೆ. ನಾಯಿ ನರಿಗಳಂತೆ ಸಾಯದೆ ಜೀವನದಲ್ಲಿ ಒಂದು ಗುರುತು ಬಿಟ್ಟು ಹೋಗು. ಭಗವಂತನನ್ನು ಪಡೆದನಂತರವೇ ಇಲ್ಲಿಂದ ಹೊರಡು."

೧೯೨೫ ರಲ್ಲಿ ನಿವೇದಿತಾ ಸ್ಕೂಲಿನಲ್ಲಿಯೇ ತಂಗಿದ್ದೆ. ಶರತ್ ಮಹಾರಾಜ್ (ಸ್ವಾಮಿ ಶಾರದಾನಂದರು) ಕಾಶಿಗೆ ಹೋಗುವಾಗ ನನ್ನನ್ನೂ ಇತರರೊಂದಿಗೆ ಕರೆದುಕೊಂಡು ಹೋಗಿದ್ದರು. ಆ ಗುಂಪಿನಲ್ಲಿ ಸ್ವಾಮಿ ನಿಖಿಲಾನಂದ, ವೈಕುಂಠ ಸನ್ಯಾಲ್ ಮುಂತಾದವರಿದ್ದರು. ಸಾರನಾಥಕ್ಕೂ ಹೋಗಿದ್ದೆವು. ಏಪ್ರಿಲ್ ತಿಂಗಳ ಮಧ್ಯಭಾಗದಲ್ಲಿ ಕೊಲ್ಕತಾಗೆ ಹಿಂತಿರುಗಿದೆವು. ಮತ್ತೆ ಜೂನ್ ತಿಂಗಳಲ್ಲಿ ನಮ್ಮಲ್ಲಿ ಕೆಲವರು ಅವರೊಂದಿಗೆ ಪುರಿಗೆ ಹೋಗಿದ್ದೆವು. ನಾವೆಲ್ಲ ಅಲ್ಲಿ ಶಶಿನಿಕೇತನದಲ್ಲಿದ್ದೆವು. ಈ ಗುಂಪಿನಲ್ಲಿ ಸುಮಾರು ೩೦ ಜನ ಸಂನ್ಯಾಸಿಗಳಿದ್ದರು. ಶರತ್ ಮಹಾರಾಜರ ಸಾನ್ನಿಧ್ಯದಲ್ಲಿ ಅವರೆಲ್ಲರೂ ಆನಂದದಿಂದಿದ್ದರು. ಅಲ್ಲಿಂದ ಹಿಂತಿರುಗಿ ಮತ್ತೆ ನಿವೇದಿತಾ ಸ್ಕೂಲಿಗೆ ಹೋದೆ.

ಕಾಶಿಯ ಸೇವಾಶ್ರಮಕ್ಕೆ ಬಂದು ಕೆಲಸ ಮಾಡುವಂತೆ, ಅವರಿವರು ನನಗೆ ಹೇಳಿ ಕಳಿಸುತ್ತಿದ್ದರು. ನಾನು ಈ ಬಗ್ಗೆ ಶರತ್ ಮಹಾರಾಜರ ಅಭಿಪ್ರಾಯ ಕೇಳಿದಾಗ ಅವರೆಂದರು, "ಸೇವಾಶ್ರಮಕ್ಕೆ ಹೋಗಿ ನೀನಿರುವುದು ನನಗೆ ಒಪ್ಪಿಗೆ ಇಲ್ಲ. ನೀನು ಅಲ್ಲಿಗೆ ಹೋಗಬೇಡ" ಎಂದು. ಇದಕ್ಕೆ ಕಾರಣವನ್ನು ಅವರು ಹೇಳಲಿಲ್ಲ. ನಾನೂ ಪ್ರಶ್ನೆ ಎತ್ತದೆ ಸುಮ್ಮನಾದೆ.

೧೯೨೬ ರಲ್ಲಿ ಬೇಲೂರು ಮಠದಲ್ಲಿ ಮೊದಲ ಮಹಾಸಭೆ (Convention) ನಡೆಯಿತು. ಶರತ್ ಮಹಾರಾಜ್ ಈ ಎಲ್ಲ ಕೆಲಸಗಳ ಒತ್ತಡದಲ್ಲಿದ್ದರು. ಈ ಕಡೆ ನಿವೇದಿತಾ ಸ್ಕೂಲಿನಲ್ಲಿ ನಾನಾ ರೀತಿಯ ಅನ್ಯಾಯದ ಕೆಲಸಗಳು, ಅವ್ಯವಹಾರಗಳು ನಡೆಯಲಾರಂಭಿಸಿದ್ದವು. ಒಮ್ಮೆ ಉದ್ಬೋಧನಕ್ಕೆ ನಾನು ಹೊರಟಾಗ, ಸ್ಕೂಲಿನ ಶಿಕ್ಷಕಿ ವಾಣಿ ನನಗೆ ಒಂದು ಪತ್ರವನ್ನು ಕೊಟ್ಟು ಸ್ವಾಮಿ ಶಾರದಾನಂದರಿಗೆ ಕೊಡುವಂತೆ ಹೇಳಿದಳು. ಪತ್ರವನ್ನು ಓದಿ ಶರತ್ ಮಹಾರಾಜ್ ಮೂಕವಿಸ್ಮಿತರಾದರು. ನನಗೂ ಓದಲು ಹೇಳಿದರು. ನಾನೂ ಓದಿ ಆಶ್ಚರ್ಯದಿಂದ ಮೂಕಳಾದೆ. ಅನಂತರ ಶರತ್ ಮಹಾರಾಜ್ ಗಂಭೀರವಾಗಿ ಹೇಳಿದರು, "ಮಹಾಮಾಯೆ ಮನುಷ್ಯರೊಳಗೆ ನಾನಾ ರೀತಿಯ ಕಾಮನೆಗಳನ್ನು ತುಂಬಿದ್ದಾಳೆ. ಮನುಷ್ಯರೇನು ಮಾಡಬಲ್ಲರು? ಮಹಾಮಾಯೆಯ ಎದುರು ಎಲ್ಲರೂ ಅಸಹಾಯಕರು." ಈ ಮಾತನ್ನು ಹೇಳುತ್ತ ಅವರು ಅಂತರ್ಮುಖರಾದರು. ಆ ರಾತ್ರಿಯೇ ಆ ಪತ್ರಕ್ಕೆ ಉತ್ತರ ಬರೆದು ನನ್ನ ಕೈಯಲ್ಲಿ ಕೊಟ್ಟರು. ಆ ದಿನ ೧೯೨೭, ಆಗಸ್ಟ್ ೬ ರ ರಾತ್ರಿ ಶಾರದಾನಂದರಿಗೆ ಪಾರ್ಶ್ವವಾಯುವಿನ ಆಘಾತವಾಯಿತು. ಎಲ್ಲರೂ ಅವರ ಕೋಣೆಗೆ ಓಡಿಬಂದರು. ಕೊನೆಯವರೆಗೂ ನಾನು ಅವರ ಹತ್ತಿರದಲ್ಲಿಯೇ ಇದ್ದೆ. ೧೯೨೭, ಆಗಸ್ಟ್ ೧೯ ರ ರಾತ್ರಿ ೧.೫೦ಕ್ಕೆ ಶ್ರೀಮಾತೆಯ ಈ ಪ್ರಿಯಪುತ್ರ ಕೊನೆಯುಸಿರೆಳೆದರು. ನಾನು ದಿಗ್ಭ್ರಾಂತಳಾಗಿದ್ದೆ. ಏನು ಯೋಚಿಸಲೂ ನನಗೆ ಸಾಧ್ಯವಾಗುತ್ತಿರಲಿಲ್ಲ. ಶರತ್ ಮಹಾರಾಜರ ಶರೀರತ್ಯಾಗದ ದಿನ ಮಹಾಪುರುಷ ಮಹಾರಾಜ್ ಅರ್ಧನಿದ್ರೆಯಲ್ಲಿ ಅವರಿಗೆ (ಶರತ್ ಮಹಾರಾಜರಿಗೆ) ಹೀಗೆ ಹೇಳಿದರಂತೆ: "...ನಾನು ಕಾಶಿಗೆ ವಿಶ್ವನಾಥನ ಬಳಿ ಹೋಗುತ್ತೇನೆ."

ಈ ವಿಷಯ ಕೇಳಿದ ನಂತರ ನನಗೂ ಕಾಶಿಗೆ ಹೋಗಿ ಇರುವ ಸಂಕಲ್ಪ ದೃಢವಾಯಿತು. ಆದರೆ ಶರೀರ ಹಾಗೂ ಮನಸ್ಸು – ಎರಡೂ ದುರ್ಬಲವಾಗಿದ್ದವು. ಸ್ಕೂಲಿನಲ್ಲಿ ಅನೇಕ ರೀತಿಯ ಗಲಾಟೆ, ಗೊಂದಲಗಳಾಗುತ್ತಿದ್ದವು. ನನಗೆ ಇದೆಲ್ಲ ಸ್ವಲ್ಪವೂ ಸರಿದೋರುತ್ತಿರಲಿಲ್ಲ. ಒಂದು ತಿಂಗಳ ನಂತರ ನನ್ನ ಚಿಕ್ಕಮ್ಮ ಪ್ರಫುಲ್ಲಾ ಕುಮಿಲ್ಲಾದಿಂದ ಬಂದರು. ಅವರ ಜೊತೆ ನಾನು ಕಾಶಿಗೆ ಹೋದೆ. ಅಲ್ಲಿ ನಾವಿಬ್ಬರೂ ರಾಮಕೃಷ್ಣ ಮಿಷನ್ನಿನ ಸೇವಾಶ್ರಮದಲ್ಲಿದ್ದೆವು. ಪ್ರಫುಲ್ಲಾ ತಮ್ಮ ಶಾಲೆಯ ರಜೆ ಮುಗಿಯಲು ಹಿಂತಿರುಗಿ ಹೋದರು. ನಾನು ಪರಿಚಿತರೊಬ್ಬರ ಮನೆಯ ಒಂದು ಕೋಣೆಯಲ್ಲಿ ಇರತೊಡಗಿದೆ. ಸ್ವಾಮಿ ಶಂಕರಾನಂದರು, "ನಿನಗೇನಾದರೂ ಅಗತ್ಯವಿದ್ದರೆ ನನಗೆ ತಿಳಿಸು" ಎಂದು ಹೇಳಿದ್ದರು. ಡಿಸೆಂಬರ್ ತಿಂಗಳಲ್ಲಿ ಮಹಾಪುರುಷ್ ಮಹಾರಾಜ್ ಕಾಶಿಗೆ ಬಂದವರು, ನನಗೆ ನಿವೇದಿತಾ ಸ್ಕೂಲಿಗೆ ಹಿಂತಿರುಗುವಂತೆ ಹೇಳಿದರು. "ಈಗಲೇ ಹೋಗುವಂತೆ ಹೇಳಬೇಡಿ, ಮಹಾರಾಜ್. ಮುಂದೆ ಮನಸ್ಸು ಸರಿಹೋದ ಮೇಲೆ ಹೋಗುತ್ತೇನೆ" ಎಂದು ಉತ್ತರಿಸಿದ್ದೆ. ಕಾಶಿಯಲ್ಲಿ ನಾನಿದ್ದ ಮನೆಯ ಸಣ್ಣ ಕೋಣೆಯಲ್ಲಿ ಸುಮಾರು ಐದು ವರ್ಷ ಚೆನ್ನಾಗಿಯೇ ಕಳೆಯಿತು. ನಂತರ ಆರೋಗ್ಯ ಕೆಟ್ಟು, ಚಿಕಿತ್ಸೆಗೆಂದು ಕೊಲ್ಕತಾಗೆ ಹೋಗಿದ್ದು, ಮತ್ತೆ ಕಾಶಿಗೆ ಮರಳಿದೆ.